# ಸೆಲೆಬ್ರಿಟಿ

■ ಹನಿ

## ಜಿಂದಾಲ್‌ಗೆ ಜೈ



ದೂರದ ಅಮೆರಿಕದಲ್ಲಿ ಲೂಸಿಯಾನ ರಾಜ್ಯದ ಗವರ್ನರ್ ಆಗಿ ಭಾರತೀಯ ಮೂಲದ ಬಾಬ್ಬಿ ಜಿಂದಾಲ್ ಎರಡನೆಯ ಬಾರಿಗೆ ಆಯ್ಕೆಯಾಗಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಮೊದಲ ಬಾರಿಗೆ ಗವರ್ನರ್ ಆಗಿ ಆಯ್ಕೆಯಾಗಿ, 'ಮೊದಲ ಭಾರತೀಯ ಮೂಲದ ಗವರ್ನರ್' ಎಂಬ ಹೆಗ್ಗಳಿಕೆ ಹೊಂದಿದ್ದ ಬಾಬ್ಬಿ ಜಿಂದಾಲ್, ಇದೀಗ ಹಿಂದಿನ ಸಲಕ್ಕಿಂತ ಹೆಚ್ಚು ಮತ ಪಡೆದಿರುವುದು ವಿಶೇಷ. ಹಿಂದಿನ ಚುನಾವಣೆಯಲ್ಲಿ ಅವರಿಗೆ ಶೇಕಡಾ 54ರಷ್ಟು ಮತ ಸಿಕ್ಕಿದ್ದರೆ, ಈ ಸಲ ಶೇಕಡಾ 66ರಷ್ಟು ಮತ ಬಿದ್ದಿದೆ. ಎರಡನೆಯ ಅಭ್ಯರ್ಥಿ ಶೇಕಡಾ 18ರಷ್ಟು ಮತ ಪಡೆದಿರುವುದು ಬಿಟ್ಟರೆ ಉಳಿದ ನಾಲ್ವರೂ 'ಏಕ ಅಂಕೆ'ಯಲ್ಲೇ ಉಳಿದಿದ್ದಾರೆ. ಚುನಾವಣೆಯ ಬಳಿಕದ ಅಮೆರಿಕನ್ ಮಾಧ್ಯಮಗಳ ವಿಶ್ಲೇಷಣೆ ನೋಡಿದರೆ, 2020ರೊಳಗೆ ಬಾಬ್ಬಿ ಜಿಂದಾಲ್, ನೇರವಾಗಿ ಅಮೆರಿಕದ ಅಧ್ಯಕ್ಷ ಹುದ್ದೆಗೇ ಲಗ್ಗೆಯಿಡುವ ಸಂಭವವೂ ಇದೆಯಂತೆ.

ಮೊದಲ ಅವಧಿಗೆ ಗವರ್ನರ್ ಆದಾಗ ಚಾಕಚಕ್ಯತೆಯಿಂದ ಲೂಸಿಯಾನಾ ರಾಜ್ಯದ ಆರ್ಥಿಕತೆಯನ್ನು ನಿಭಾಯಿಸಿದ್ದೇ ಬಾಬ್ಬಿ ಜಿಂದಾಲ್ ಜನಪ್ರಿಯತೆ ಹೆಚ್ಚಲು ಕಾರಣ ಎನ್ನಲಾಗಿದೆ. ತೆರಿಗೆ ಕಡಿತ ಮಾಡಿ ನಾಗರಿಕರ ಹೊರೆ ಕಡಿಮೆ ಮಾಡಿದ್ದು ಮತ್ತು ಸರಕಾರದ ಖರ್ಚು ಕಡಿಮೆ ಮಾಡಿ ಆಡಳಿತ ಸುಧಾರಣೆ ನಡೆಸಿದ್ದು ಜಿಂದಾಲ್‌ರ ಮುಖ್ಯ ಸಾಧನೆ. 'ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ ಮುಖ್ಯವಾಗಿ ಸರ್ಕಾರಿ ಶಿಕ್ಷಣದ ಸುಧಾರಣೆ ನಡೆಸುತ್ತೇನೆ' ಎಂದು ಜಿಂದಾಲ್ ಈಗಾಗಲೆ ಪ್ರಕಟಿಸಿದ್ದಾರೆ. ಹಾಗೆ ನೋಡಿದರೆ, ಕಳೆದ ವರ್ಷವೇ '2012ರ ರಾಷ್ಟ್ರಾಧ್ಯಕ್ಷರ ಚುನಾವಣೆಗೆ ಬಾಬ್ಬಿ ಜಿಂದಾಲ್ ಸ್ಪರ್ಧಿಸಬಹುದು' ಎಂದು ಸುದ್ದಿ ಹಬ್ಬಿತ್ತು. ಆದರೆ ಜಿಂದಾಲ್ ಅದನ್ನು ನಿರಾಕರಿಸಿದ್ದೇ ಅಲ್ಲದೆ, ಎರಡನೆಯ ಅವಧಿಯ ಗವರ್ನರ್ ಹುದ್ದೆಗೇ ಗಮನ ಕೇಂದ್ರೀಕರಿಸಿದ್ದರು. ಬಹುಶಃ ಅವಸರ ಮಾಡುವುದು ಬೇಡವೆಂಬುದು ಅವರ ದೂರಾಲೋಚನೆ ಇರಬಹುದು. ಈಗ ಎರಡನೆ ಬಾರಿಗೆ ಗವರ್ನರ್ ಆದ ಬಳಿಕ ರಾಜಕೀಯ ಸ್ಥಾನಮಾನ ಇನ್ನಷ್ಟು ಬಲಗೊಂಡಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಅವರ ಮಾತಿಗೆ ಹೆಚ್ಚು ತೂಕ ಬರಲಿದೆ.

ಬಾಬ್ಬಿ ಹುಟ್ಟಿದ್ದು (ಬರ್ತ್‌ಡೇ 10-6-71) ಲೂಸಿಯಾನದಲ್ಲೇ. ಪಂಜಾಬಿನಿಂದ ಅವರ ತಂದೆ, ಸಿವಿಲ್ ಎಂಜಿನಿಯರ್ ಆಗಿದ್ದ ಅಮರ್ ಮತ್ತು ತಾಯಿ ರಾಜ್ ಜಿಂದಾಲ್ ಅಮೆರಿಕಕ್ಕೆ ವಲಸೆ ಹೋದದ್ದು 1971ರಲ್ಲಿ. ಆಗ ರಾಜ್ ನಾಲ್ಕು ತಿಂಗಳ ಗರ್ಭಿಣಿ. ಅಮೆರಿಕದಲ್ಲೇ ವಿದ್ಯೆ ಕಲಿತು, ಗವರ್ನರ್ ಆದ ಬಾಬ್ಬಿ 2008ರಲ್ಲಿ 'ದೇಶದ ಅತ್ಯಂತ ಜನಪ್ರಿಯ ಗವರ್ನರ್' ಎಂದೂ ಸಮೀಕ್ಷೆಯಲ್ಲಿ ಹೊರಹೊಮ್ಮಿದ್ದರು. ಪ್ರತಿಭೆಯ ಬಲದಿಂದಲೇ ಬಯಾಲಜಿ ಮೇಜರ್ ಸೀಟ್ ಪಡೆದ ಬಾಬ್ಬಿ, 20ರ ಹರೆಯದಲ್ಲೇ ಪದವೀಧರರಾದರು. ಆಕ್ಸ್‌ಫರ್ಡ್ ವಿ.ವಿ ಯಿಂದ ಪೊಲಿಟಿಕಲ್ ಸೈನ್ಸ್‌ನಲ್ಲಿ ಎಂ.ಲಿಟ್ ಪಡೆದರು. ಹುಟ್ಟಿನಿಂದ ಹಿಂದೂ ಆಗಿದ್ದರೂ, ಬಾಲ್ಯದಲ್ಲೇ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ ಬಾಬ್ಬಿ ಜಿಂದಾಲ್, ಈಗ ರಿಪಬ್ಲಿಕನ್ ಪಕ್ಷದ 'ಪ್ರಭಾವಶಾಲಿ ಧ್ವನಿ'ಯಾಗಿ ಬೆಳೆದಿರುವುದು ದೊಡ್ಡ ಸಾಧನೆಯೇ.

ಸದ್ಯಕ್ಕೆ ಆಫ್ರಿಕನ್ ಮೂಲದ ಬರಾಕ್ ಒಬಾಮಾ ಅಮೆರಿಕದ ಅಧ್ಯಕ್ಷರಾಗಿ ದಾಖಲೆ ನಿರ್ಮಿಸಿದ್ದಾರೆ, ನಾಳೆ ಭಾರತೀಯ ಮೂಲದ ಬಾಬ್ಬಿಯೂ ಅಧ್ಯಕ್ಷ ಆಗಬಹುದು!- ಯಾರಿಗೆ ಗೊತ್ತು..?

## ಚಾಪೆಲ್ ಚಪಲ



ಗ್ರೆಗ್ ಚಾಪೆಲ್‌ಗೆ ಏನಾಗಿದೆ? ಸುಖಾ ಸುಮ್ಮನೇ ಭಾರತೀಯ ಆಟಗಾರರ ಬಗ್ಗೆ ಲಘುವಾಗಿ ಮಾತನಾಡುವುದು ಒಂದು ಚಪಲವೇ ಆಗಿಬಿಟ್ಟಿದೆಯೆ? ಇಲ್ಲವಾದಲ್ಲಿ ಭಾರತ ಮಾತ್ರವಲ್ಲ, ಕ್ರಿಕೆಟ್ ಜಗತ್ತೇ ಕಂಡ ಅತ್ಯಂತ ಪ್ರತಿಭಾವಂತ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಬಗ್ಗೆ ಹೀಗೆಲ್ಲ ಲಘುವಾಗಿ ಏಕೆ ಮಾತನಾಡಬೇಕಿತ್ತು? ಆಸ್ಟ್ರೇಲಿಯಾದ ಭಾರತದ ಪ್ರವಾಸಕ್ಕೆ ಪೂರ್ವಭಾವಿಯಾಗಿ ಅವರೇನಾದರೂ ಕ್ರಿಕೆಟ್ ರಾಜಕೀಯ ಶುರು ಮಾಡಿರಬಹುದೆ? 'ನಾನು ಭಾರತ ತಂಡದ ಕೋಚ್ ಆಗಿದ್ದಾಗ ಸಚಿನ್ ನಿಜಕ್ಕೂ ತನ್ನ ಫಾರ್ಮ್ ಬಗ್ಗೆ ಭಾರೀ ಹೆದರಿಕೊಂಡಿದ್ದ. ಅವನಲ್ಲಿ ಆತ್ಮವಿಶ್ವಾಸವೇ ಇರಲಿಲ್ಲ. ಕಳಪೆ ಫಾರ್ಮ್‌ನಿಂದ ಹೊರಬರಲು ತಿಣುಕಾಡುತ್ತಿದ್ದ. ನನ್ನ ಬಳಿ ತನ್ನ ಎಲ್ಲ ಭಯ, ದೌರ್ಬಲ್ಯಗಳ ಬಗ್ಗೆ ಸಚಿನ್ ಹೇಳಿಕೊಂಡಿದ್ದ' ಎಂದು ಗ್ರೆಗ್ ಚಾಪೆಲ್ ಬರೆದಿರುವುದು ಇದೀಗ ಕ್ರಿಕೆಟ್ ಜಗತ್ತಿನಲ್ಲಿ ಹೊಸ ವಿವಾದ ಹುಟ್ಟಿಸಿದೆ.

ಗ್ರೆಗರಿ ಸ್ಟೀಫನ್ ಚಾಪೆಲ್ (ಬರ್ತ್‌ಡೇ 7-8-1948) ಆಸ್ಟ್ರೇಲಿಯಾ ಕಂಡ ಅತ್ಯುತ್ತಮ ಕ್ರಿಕೆಟ್ ನಾಯಕ ಎನ್ನುವುದರಲ್ಲಿ ಎರಡು ಮಾತಿಲ್ಲ. 1975ರಿಂದ 77ರವರೆಗೆ ನಾಯಕನಾಗಿ ಬಳಿಕ ಬಂಡಾಯವೆದ್ದು ತಂಡ ತ್ಯಜಿಸಿ, ಬಳಿಕ 1979ರಲ್ಲಿ ಮರಳಿ ನಾಯಕನಾದದ್ದು ಆತನ ದೊಡ್ಡ ಸಾಧನೆಯೇ. ಎರಡನೆ ಎಂಟ್ರಿಯಲ್ಲಿ ಐದು ವರ್ಷಗಳ ಕಾಲ ನಾಯಕತ್ವ ನಿಭಾಯಿಸಿದ ಅವಧಿಯಲ್ಲಿ ವ್ಯಕ್ತಿಗತ ಸಾಧನೆಯೂ ಸಾಕಷ್ಟಿತ್ತು. ಆಕ್ರಮಣಕಾರಿ ಬ್ಯಾಟಿಂಗ್ ಅಲ್ಲದೆ, ಮಧ್ಯಮ ವೇಗದ ಬೌಲಿಂಗ್ ಮತ್ತು ಅತ್ಯುತ್ತಮ ಫೀಲ್ಡಿಂಗ್- ಎಲ್ಲವೂ ಇತ್ತು. 1984ರಲ್ಲಿ ನಿವೃತ್ತಿಗೆ ಮುನ್ನ ಅತ್ಯಧಿಕ ಕ್ಯಾಚ್ ಹಿಡಿದ ವಿಶ್ವದಾಖಲೆಯೂ ಗ್ರೆಗ್ ಹೆಸರಲ್ಲಿತ್ತು. ಆಸ್ಟ್ರೇಲಿಯಾದ ಆಯ್ಕೆ ಮಂಡಲಿ ಸದಸ್ಯರಾಗಿ, ಕೋಚ್ ಆಗಿಯೂ ಹೆಸರು ಮಾಡಿದರು.

ನಾಯಕನಾಗಿದ್ದಾಗಲೇ ಪಂದ್ಯವೊಂದರಲ್ಲಿ ಬೌಲರ್‌ಗೆ ಅಂಡರ್ ಆರ್ಮ್ ಬೌಲಿಂಗ್ ಮಾಡಲು ಹೇಳಿ ವಿವಾದ ಎಬ್ಬಿಸಿದ್ದ ಹಳೇ ಸುದ್ದಿ. 2005ರಲ್ಲಿ ಭಾರತದ ಕ್ರಿಕೆಟ್ ಕೋಚ್ ಆಗಿ ಗ್ರೆಗ್ ಆಯ್ಕೆಯಾದ ಬಳಿಕ ಆತನ ಬಾಯಿಚಪಲದ ಪರಿಚಯ ಭಾರತೀಯರಿಗೂ ಆಯಿತು. ಆಗ ನಾಯಕನಾಗಿದ್ದ ಸೌರವ್ ಗಂಗೂಲಿ ಪದಚ್ಯುತಿಯಲ್ಲಿ ಗ್ರೆಗ್ ಪಾತ್ರವೂ ದೊಡ್ಡದೇ. 2007ರಲ್ಲಿ ಗ್ರೆಗ್ ತರಬೇತಿ ನೀಡಿದ ಭಾರತೀಯ ತಂಡ ವಿಶ್ವಕಪ್‌ನಲ್ಲಿ ಸೋಲನುಭವಿಸಿದ ಬಳಿಕ ಕೋಚ್ ಹುದ್ದೆಯಿಂದ ನಿರ್ಗಮಿಸಬೇಕಾಯಿತು. ರಾಜಸ್ತಾನ್ ರಾಯಲ್‌ಗೆ ಹಾಗೂ ಆ ಬಳಿಕ 20:20 ಟೂರ್ನಿಯಲ್ಲಿ ವಿಐಪಿ ಆಟಗಾರರಿಗೆ ಕೋಚ್ ಆಗಿದ್ದ ಗ್ರೆಗ್ ಸಜ್ಜನಿಕೆಯನ್ನು ಮಾತ್ರ ಕಲಿತೇ ಇಲ್ಲ ಎನ್ನುವುದು ಈಗ ಸಾಬೀತಾಗಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65